ಇ) ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ಮಾಡಿರುವ ಖರ್ಚು ಹಾಗೂ ಸಾಧನೆಗಳೇನು.

ಈ) ಅಲ್ಲಿಯ ಕುಡಿಯುವ ನೀರಿನ ಕೊರತೆಯನ್ನು ಸರ್ಕಾರ ಯಾವ ರೀತಿಯಲ್ಲಿ ನೀಗಿಸುವುದು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಮುಲ್ಕಿ ಪಟ್ಟಣದ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯು ಸರ್ಕಾರಿ ಆದೇಶ ಸಂಖ್ಯೆ : ಹೆಚ್ಯುಡಿ:81: ಯುಡಬ್ಲ್ಯೂಎಸ್ 90 ದಿನಾಂಕ: 14-3-91ರಲ್ಲಿ ರೂ. 10.00 ಲಕ್ಷಗಳಿಗೆ ಮಂಜೂರಾತಿ ನೀಡಿದೆ.

ಆ) ಜನವರಿ 1994ರ ಅಂತ್ಯದವರೆಗೆ ಈ ಯೋಜನೆಗೆ ರೂ. 10.63 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ರೂ. 25.00 ಲಕ್ಷಗಳು ಆಗುತ್ತದೆ.

ಇ) ಜನವರಿ 1994 ಅಂತ್ಯದ ವೇಳೆಗೆ ಈ ಯೋಜನೆಗೆ ರೂ. 10.63 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ವಿತರಣಾ ಕೊಳವೆಗಳನ್ನು ಹಾಕುವುದು, ಸಾರ್ವಜನಿಕ ನಲ್ಲಿಗಳು ಅಳವಡಿಸುವ ಕಾರ್ಯ ಸಂಪೂರ್ಣಗೊಂಡಿದೆ.

ಈ) ಈ ಮೇಲಿನ ಯೋಜನೆಯಲ್ಲಿನ ಕೆಲಸಗಳು ಸಂಪೂರ್ಣಗೊಂಡು, 4-2-93ರಲ್ಲಿ ಚಾಲು ಮಾಡಲಾಗಿದೆ. ಮೇಲಿನ ಯೋಜನೆ ಕೆಲಸಗಳಲ್ಲದೇ ಮುಲ್ಕಿ ಪಟ್ಟಣದ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮತ್ತೊಂದು 9.14 ಮಿ. ವ್ಯಾಸ ಹಾಗೂ 9-14 ಮಿ: ಆಳದ ತೆರೆದ ಬಾವಿಯನ್ನು 2.20 ಲಕ್ಷ ರೂ. ಅಂದಾಜಿನಲ್ಲಿ ಹೇಜಮಾಡಿ . ಹತ್ತಿರ ತೋಡಲಾಗಿದ್ದು ನೀರನ್ನು ಪುರಸಭೆಯ ಹತ್ತಿರ ಇರುವ ಮೇಲ್ಮಟ್ಟದ ಜಲಸಂಗ್ರಾಹಾಗಾರಕ್ಕೆ ಪಂಪು ಮಾಡಲು 110 ಮಿ.ಮಿ. ವ್ಯಾಸದ ಪಿವಿಸಿ ಕೊಳವೆ ಮಾರ್ಗದ ಕೆಲಸವನ್ನು ಸಧ್ಯದಲ್ಲೇ ಪೂರ್ಣಗೊಳಿಸಲಾಗುವುದು.

ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳ ಹಸ್ತಾಂತರದಲ್ಲಿ ವಿಳಂಬ

622 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯ ಅತಿ ದೊಡ್ಡ ಬಡಾವಣೆಯಾದ ಶಿವಮೊಗ್ಗ ಕಲ್ಲಹಳ್ಳಿ ಎರಡನೇ ಹಂತದ 1250 ಮನೆಗಳು ಶೇಕಡಾ 90 ಭಾಗ ಕೆಲಸಗಳು ಮುಗಿದಿದ್ದು, ಇನ್ನೂ 10 ಭಾಗ ಕೆಲಸಗಳನ್ನು ಎರಡು ವರ್ಷದಿಂದ ಪೂರ್ಣಗೊಳಿಸದೇ ಹಂಚಿಕೆದಾರರಿಗೆ ಹಸ್ತಾಂತರ ಮಾಡದಿರುವುದಕ್ಕೆ ಕಾರಣವೇನು?

ಆ) ಬಾಕಿ ಉಳಿದ ಶೇಕಡಾ 10 ಭಾಗ ಕೆಲಸಕಾರ್ಯಗಳಿಗೆ ಎಷ್ಟು ಹಣ ಬೇಕಾಗುತ್ತದೆ.

ಇ) ಯಾವಾಗ ಪೂರ್ಣ ನಾಗರೀಕ ಸೌಲಭ್ಯಗಳೊಂದಿಗೆ ಮನೆಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುವುದು?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು.) :

ಅ) ಒಳಚರಂಡಿ ವ್ಯವಸ್ಥೆ ವಿದ್ಯುದೀಕರಣದ ಕೆಲಸಗಳು ಪೂರ್ಣವಾಗುವ ಹಂತದಲ್ಲಿರುವುದರಿಂದ ಹಂಚಿಕೆದಾರರಿಗೆ ಹಸ್ತಾಂತರ ಮಾಡಿರುವುದಿಲ್ಲ.

ಆ) ಬಾಕಿ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಸುಮಾರು 177 ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಇ) ಉಳಿದಿರುವ ನಾಗರೀಕ ಸೌಲಭ್ಯಗಳ ಕೆಲಸಗಳು ಪೂರ್ಣಗೊಂಡ ಕೂಡಲೇ ಮನೆಗಳನ್ನು ಗ್ರಾಹಕರಿಗೆ ಹಸ್ತಾಂತರಿಸಲಾಗುವುದು.